ವರೆಗೆ ಒಟ್ಟು 17.50 ಕಿಮೀ ಉದ್ದವಿರುತ್ತದೆ. ರಸ್ತೆಯ ಅಗಲ ಸರಪಳಿ 127.50 ರಿಂದ 139.00 ಕಿಮೀ ವರೆಗೆ 7.00 ಮೀ. ಗಳಿರುತ್ತದೆ.

ಹಾಗೂ ಸರಪಳಿ 139.00 ರಿಂದ 145.0 ಕಿಮೀ ವರೆಗೆ 5.50 ಮೀ ಅಗಲವಿರುತ್ತದೆ.

ಮೇಲೆ ತಿಳಿಸಿದಂತೆ ರಸ್ತೆಯ ಅಗಲವು IRC ನ ಮಾನದಂಡಗಳ ಪ್ರಕಾರ ಹಾಲಿ ಇರುವ ರಸ್ತೆಯ ಅಗಲವು ರಸ್ತೆಯಲ್ಲಿನ ವಾಹನ ಸಾಂದ್ರತೆಯನ್ನು ಹೊರುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆದಾಗ್ಯೂ ಇದೇ ರಸ್ತೆಯ ಸರಪಳಿ 127.80 ರಲ್ಲಿ ಲೆವೆಲ್ ಕ್ರಾಸಿಂಗ್ ಇದ್ದು ಗೇಟ್ ಮುಚ್ಚಿದಾಗ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ಅಡಚಣೆ ಯಾಗಿರುತ್ತದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಪ್ರಸಕ್ತ ಸಾಲಿನ ಪೂರ್ವ ಮುಂಗಾರು ಹಾಗೂ ನಂತರದ ಮುಂಗಾರು ಯೋಜನೆಯಡಿ ಒದಗಿಸಿದ ರೂ.15.00 ಲಕ್ಷಗಳ ಅನುದಾನದಡಿ ಸದರಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲಾಗಿದೆ.

ಇ) ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

476 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಿಂದ ಮದ್ದೂರು ಗಡಿವರೆಗೆ ಮಾರ್ಗ ಚೀರನಹಳ್ಳಿ, ಹಳುವಾಡಿ, ತಗ್ಗಹಳ್ಳಿ ರಸ್ತೆ ಹಾಗೂ ಮಂಡ್ಯ ಗುತ್ತಲು ರಸ್ತೆಯಿಂದ ಚನ್ನಪ್ಪನದೊಡ್ಡಿ ಬೇಲೂರು ಮಾರ್ಗವಾಗಿ ಕನ್ನಲಿಗೆ ಹೋಗುವ ರಸ್ತೆ ಮತ್ತು ಮಂಡ್ಯ ಬನ್ನೂರು ರಸ್ತೆ ಮಾರ್ಗ – ಕೊತ್ತತ್ತಿ, ಬೇವಿನಹಳ್ಳಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮತ್ತು ಆ) ಮಂಡ್ಯದಿಂದ ಮದ್ದೂರು ಗಡಿವರೆಗೆ ಮಾರ್ಗ ಚೀರನಹಳ್ಳಿ, ಹಳುವಾಡಿ, ತಗ್ಗಹಳ್ಳಿ ರಸ್ತೆಯು 9.85 ಕಿಮೀ ಉದ್ದವಿದ್ದು, ಇದರ ಪೈಕಿ ಸರಪಳಿ 0.00 ರಿಂದ 2.00 ಕಿಮೀ ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ.

ಸರಪಳಿ 2.00 ರಿಂದ 9.85 ಕಿಮೀ ವರೆಗಿನ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು 2009–10ನೇ ಸಾಲಿನ ಅನುದಾನದ ಲಭ್ಯತೆಯ ಮೇಲೆ ಪರಿಶೀಲಿಸಲಾಗುವುದು.

ಮಂಡ್ಯ ಗುತ್ತಲು ರಸ್ತೆಯಿಂದ ಚನ್ನಪ್ಪನದೊಡ್ಡಿ ಬೇಲೂರು ಮಾರ್ಗವಾಗಿ ಕನ್ನಲಿಗೆ ಹೋಗುವ ರಸ್ತೆಯು 8.00 ಕಿಮೀ ಉದ್ದವಿದ್ದು, ಇದರ ಪೈಕಿ ಸರಪಳಿ 0.00 ರಿಂದ 4.00 ಕಿಮೀ ರಸ್ತೆಯನ್ನು ಅಭಿವೃದ್ಧಿಪಡಿಸಲು 2009–10 ನೇ ಸಾಲಿನ ಅನುದಾನದ ಲಭ್ಯತೆಯ ಮೇಲೆ ಪರಿಶೀಲಿಸಲಾಗುವುದು. ಇದೇ ರಸ್ತೆಯ ಬಾಕಿ ಉಳಿದ ಸರಪಳಿ 4.00 ರಿಂದ 8.00 ಕಿಮೀ ಉದ್ದದ ರಸ್ತೆಯನ್ನು ಗುಂಡಿ ಮುಚ್ಚಲು ರೂ.2.00 ಲಕ್ಷ ಅನುದಾನ ನಿಗದಿಪಡಿಸಿದ್ದು, ಈ ಗುಂಡಿ ಮುಚ್ಚುವ ಕಾಮಗಾರಿಯನ್ನು ಜನವರಿ 2010 ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

ಮಂಡ್ಯ ಬನ್ನೂರು ರಸ್ತೆ ಮಾರ್ಗ ಕೊತ್ತತ್ತಿ, ಬೇವಿನಹಳ್ಳಿ ರಸ್ತೆಯು 16 ಕಿಮೀ ಉದ್ದವಿದ್ದು, ಇದರ ಪೈಕಿ ಸರಪಳಿ 0.00 ರಿಂದ 3.00 ಕಿಮೀ ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ, ಸರಪಳಿ 5.00 ರಿಂದ 16.00 ಕಿಮೀ ವರೆಗೆ ಉದ್ದದ ರಸ್ತೆಯಲ್ಲಿನ ಗುಂಡಿ ಮುಚ್ಚುವ ಹಾಗೂ ದುರಸ್ತಿ ಕಾಮಗಾರಿಯನ್ನು ರೂ. 63.00 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

ಸರಪಳಿ 3.00 ರಿಂದ 5.00 ಕಿಮೀ ವರೆಗಿನ ರಸ್ತೆಯನ್ನು ಅಭಿವೃದ್ಧಿಪಡಿಸಲು 2009–10 ನೇ ಸಾಲಿನ ಅನುದಾನದ ಲಭ್ಯತೆಯ ಮೇಲೆ ಪರಿಶೀಲಿಸಲಾಗುವುದು.

588 ಶ್ರೀ ಶ್ರೀನಿವಾಸ್(ವಾಸು) ಎಸ್.ಆರ್. (ಗುಬ್ಬಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?